SC. No. 22/2021
PW.27

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ**

**ಉತ್ತರ ಕನ್ನಡ : ಕಾರವಾರ**

**ಎಸ್.ಸಿ. ಕೇಸ್ ನಂ.22/2021**

**ದೋ.ಸಾ. : 44 ಫ್ರಾ.ಸಾ. :27**

| | | |
|---|---|---|
| ಸಾಕ್ಷಿಯ ಹೆಸರು | : | ಕಸ್ತೂರಿ ವಡೆಯರ್ |
| ತಂದೆಯ ಹೆಸರು | : | ಲಕ್ಷ್ಮಣ ವಡೆಯರ್ |
| ವಯಸ್ಸು | : | 41 ವರ್ಷ |
| ಕೆಲಸ | : | ಹಿರಿಯ ವೈಜ್ಞಾನಿಕ ಅಧಿಕಾರಿ, (ಜೀವಶಾಸ್ತ್ರ ವಿಭಾಗ), ಆರ್.ಎಫ್.ಎಸ್.ಎಲ್, ಮಂಗಳೂರು |
| ವಾಸ | : | ಮಂಗಳೂರು |

**ದಿನಾಂಕಃ 09.02.2026 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

1. 2014 ರಿಂದ 2019 ರವರಗೆ ವೈಜ್ಞಾನಿಕ ಅಧಿಕಾರಿಯಾಗಿ ಹಾಗೂ ಡಿಸೆಂಬರ್ 2019 ರಿಂದ ಇಲ್ಲಿಯವರೆಗೆ ನಾನು ಮಂಗಳೂರಿನ ಫ್ರಾದೇಶಿಕ ವಿಧಿ ವಿಜ್ಞಾನ ಪ್ರಯೋೇಗಲಾಯದ ಜೀವಶಾಸ್ತ್ರ ವಿಭಾಗದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಜೀವಶಾಸ್ತ್ರ ವಿಷಯದಲ್ಲಿ ಸ್ನಾತಕೋತರ ಪದವಿಯನ್ನು ಪಡೆದಿರುತ್ತೇನೆ ಹಾಗೂ ಎಂ.ಫಿಲ್ ಪದವಿಯನ್ನು ಪಡೆದಿರುತ್ತೇನೆ. ನನ್ನ ಈ ವರೆಗಿನ ಸೇವಾ ಅವಧಿಯಲ್ಲಿ ಸುಮಾರು 2800 ಕ್ಕಿಂತಲೂ ಹೆಚ್ಚಿನ ಪ್ರಕರಣಗಳಲ್ಲಿ ಮುದ್ದೆ ಮಾಲುಗಳನ್ನು ಪರೀಕ್ಷಿಸಿ ವರದಿಯನ್ನು ನೀಡಿರುತ್ತೇನೆ ಹಾಗೂ 300 ಕ್ಕಿಂತಲೂ ಹೆಚ್ಚಿನ ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತೇನೆ.

2. ದಿನಾಂಕ 15.05.2021 ರಂದು ಹೊನ್ನಾವರ ಪೊಲೀಸ್ ಠಾಣೆ ಗುನ್ನಾ ನಂಬರ 136/2021 ಕ್ಕೆ ಸಂಬಂಧಿಸಿದಂತೆ ಪೊಲೀಸ್ ಸಿಬ್ಬಂದಿಯಾದ ಚಾ.ಸಾ–31/ಸಿಪಿಸಿ119 ರವರು ಒಟ್ಟು 12 ಸೀಲಾದ ವಸ್ತುಗಳನ್ನು ಮೇಲಾಧಿಕಾರಿಗಳ ಕೋರಿಕೆ ಪತ್ರದೊಂದಿಗೆ ತಂದು

ನಮ್ಮ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ನೀಡಿದ್ದು, ಅವುಗಳನ್ನು ನಮ್ಮ ಸ್ವೀಕೃತಿ ವಿಭಾಗದವರು ಪಡೆದುಕೊಂಡು, ಅದೇ ದಿನ ನಮ್ಮ ಪ್ರಯೋಗಾಲಯದ ಮುಖ್ಯಸ್ಥರು ಸದರಿ ವಸ್ತುಗಳನ್ನು ಪರೀಕ್ಷೆಗಾಗಿ ನನಗೆ ನೀಡಿರುತ್ತಾರೆ. ಸದರಿ ವಸ್ತುಗಳನ್ನು ಪಡೆದುಕೊಂಡ ನಂತರ ನಾನು ಅವುಗಳನ್ನು ಪರೀಶಿಲಿಸಲಾಗಿ, ಅವುಗಳ ಮೇಲೆ ಇದ್ದ ಮೊಹರುಗಳು ಸುಸ್ಥಿತಿಯಲ್ಲಿದ್ದವು ಹಾಗೂ ಮಾದರಿ ಮೊಹರುಗಳಿಗೆ ತಾಳೆಯಾಗುತ್ತಿತ್ತು. ಆನಂತರ ನಂತರ ದಿನಾಂಕ 12.07.2021 ರಂದು ನಾನು ಸದರಿ ವಸ್ತುಗಳನ್ನು ಪರೀಕ್ಷೆಗಾಗಿ ನಮ್ಮ ಪ್ರಯೋಗಾಲಯದಲ್ಲಿ ತೆರೆದು ನೋಡಿದಾಗ, ವಸ್ತು ಸಂಖ್ಯೆ 1 ರಲ್ಲಿ A ಎಂದು ಗುರುತು ಮಾಡಿದ ಒಂದು ಮುರಿದ ಕನ್ನಡಕ, ವಸ್ತು ಸಂಖ್ಯೆ 2 ರಲ್ಲಿ B ಎಂದು ಗುರುತು ಮಾಡಿದ ಒಂದು ಎಡಕಾಲಿನ ಚಪ್ಪಲಿ, ವಸ್ತು ಸಂಖ್ಯೆ 3 ರಲ್ಲಿ C ಎಂದು ಗುರುತು ಮಾಡಿದ ರಕ್ತ ಮಿಶ್ರಿತ ಮಣ್ಣು, ವಸ್ತು ಸಂಖ್ಯೆ 4 ರಲ್ಲಿ D ಎಂದು ಗುರುತು ಮಾಡಿದ ಮಾದರಿ ಮಣ್ಣು, ವಸ್ತು ಸಂಖ್ಯೆ 5 ರಲ್ಲಿ E ಎಂದು ಗುರುತು ಮಾಡಿದ ಒಂದು ಬಡಿಗೆ, ವಸ್ತು ಸಂಖ್ಯೆ 6 ರಲ್ಲಿ F ಎಂದು ಗುರುತು ಮಾಡಿದ ಒಂದು ಶರ್ಟ್, ವಸ್ತು ಸಂಖ್ಯೆ 7 ರಲ್ಲಿ G ಎಂದು ಗುರುತು ಮಾಡಿದ ಒಂದು ಲುಂಗಿ, ವಸ್ತು ಸಂಖ್ಯೆ 8 ರಲ್ಲಿ H ಎಂದು ಗುರುತು ಮಾಡಿದ ಒಂದು ಚಾಕು, ವಸ್ತು ಸಂಖ್ಯೆ 9 ರಲ್ಲಿ I ಎಂದು ಗುರುತು ಮಾಡಿದ ಒಂದು ಬಿಳಿ ಬಣ್ಣದ ಬಟ್ಟೆಯ ಚೀಲ, ವಸ್ತು ಸಂಖ್ಯೆ 10 ರಲ್ಲಿ J ಎಂದು ಗುರುತು ಮಾಡಿದ ಒಂದು ಲುಂಗಿ, ವಸ್ತು ಸಂಖ್ಯೆ 11 ರಲ್ಲಿ K ಎಂದು ಗುರುತು ಮಾಡಿದ ಒಂದು ಶರ್ಟ್, ವಸ್ತು ಸಂಖ್ಯೆ 12 ರಲ್ಲಿ L ಎಂದು ಗುರುತು ಮಾಡಿದ ಒಂದು ನಿಕ್ಕರ್ ಇದ್ದವು.

3. ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ, ವಸ್ತು ಸಂಖ್ಯೆ D ಯನ್ನು ಹೊರತುಪಡಿಸಿ, ಉಳಿದ ಎಲ್ಲಾ ವಸ್ತುಗಳಿಗೆ ರಕ್ತದ ಕಲೆಗಳು ಇರುವುದು ಕಂಡುಬಂದಿರುತ್ತದೆ ಹಾಗೂ ಸದರಿ ರಕ್ತವು ಮಾನವ ಮೂಲದ ರಕ್ತವಾಗಿರುತ್ತದೆ ಮತ್ತು ಅದು AB ಗುಂಪಿಗೆ ಸೇರಿದ್ದಾಗಿರುತ್ತದೆ. ಸದರಿ ರಕ್ತದ ಕಲೆಗಳು ಒಣ ರಕ್ತದ ಕಲೆಗಳಾಗಿದ್ದರಿಂದ ಅದರ RH ಫ್ಯಾಕ್ಟರನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಿಲ್ಲ. ಈ ಕುರಿತಂತೆ ದಿನಾಂಕ 17.01.2022 ರಂದು ವರದಿಯನ್ನು ನೀಡಿರುತ್ತೇನೆ. ಅದಾದ ನಂತರ ನಾನು ಪರೀಕ್ಷೆಗೆ ಒಳಪಡಿಸಿದ ಎಲ್ಲಾ ವಸ್ತುಗಳನ್ನು ಪುನಃ ಸೀಲ್ ಮಾಡಿ, ಅವುಗಳಿಗೆ ನಮ್ಮ ಕಚೇರಿಯ ಮೊಹರು ಮಾಡಿ, ಮಾದರಿ ಮೊಹರಿನೊಂದಿಗೆ ಸಂಬಂಧಿಸಿದ ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ವರದಿ ಹಾಗೂ ಮಾದರಿ ಮೊಹರನ್ನು ನೋಡಿ ಗುರುತಿಸಿದ್ದು, ವರದಿಯನ್ನು ನಿ.ಪಿ 103 ಎಂದು,

ಸಾಕ್ಷಿಯ ಸಹಿಯನ್ನು ನಿ.ಪಿ 103(ಎ) ಎಂದು, ಮಾದರಿ ಮೊಹರನ್ನು ನಿ.ಪಿ 104 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 104(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ವಿಸಿಯ ಮೂಲಕ ಸಾಕ್ಷಿಗೆ ತೋರಿಸಲಾಗಿ, ವಸ್ತು ಸಂಖ್ಯೆ 1 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.5 ಎಂದು, ವಸ್ತು ಸಂಖ್ಯೆ 2 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.6 ಎಂದು, ವಸ್ತು ಸಂಖ್ಯೆ 3 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.12 ಎಂದು, ವಸ್ತು ಸಂಖ್ಯೆ 4 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.13 ಎಂದು,ವಸ್ತು ಸಂಖ್ಯೆ 5 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.7 ಎಂದು, ವಸ್ತು ಸಂಖ್ಯೆ 6 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.1 ಎಂದು, ವಸ್ತು ಸಂಖ್ಯೆ 7 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.3 ಎಂದು, ವಸ್ತು ಸಂಖ್ಯೆ 8 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.2 ಎಂದು, ವಸ್ತು ಸಂಖ್ಯೆ 9 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.4 ಎಂದು, ವಸ್ತು ಸಂಖ್ಯೆ 10 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.8 ಎಂದು, ವಸ್ತು ಸಂಖ್ಯೆ 11 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.9 ಎಂದು, ವಸ್ತು ಸಂಖ್ಯೆ 12 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಒ.10 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ., ರವರಿಂದಃ-**

4. ಪ್ರಯೋಗಾಲಯಕ್ಕೆ ಬಂದಂತಹ ವಸ್ತುಗಳನ್ನು ಯಾವ ದಿನಾಂಕದಂದು ಸೀಲ್ ಮಾಡಲಾಗಿತ್ತು ಎಂದು ನನಗೆ ಮಾಹಿತಿ ಇಲ್ಲ. ರಕ್ತದ ಕಲೆಗಳು ಗುಣಮಟ್ಟ ಕಳೆದುಕೊಳ್ಳದಿರಲು ಸರಿಯಾದ ರೀತಿಯಲ್ಲಿ ಸಂರಕ್ಷಣೆ ಮಾಡಬೇಕಾಗುತ್ತದೆ ಎಂದರೆ ಸರಿ. ನಮ್ಮ ಪ್ರಯೋಗಾಲಯಕ್ಕೆ ಬಂದಂತಹ ವಸ್ತುಗಳನ್ನು ಬಟ್ಟೆಯ ಚೀಲದಲ್ಲಿ ಸಂರಕ್ಷಿಸಿ ಕಳುಹಿಸಿದ್ದರು. ಪ್ರಯೋಗಾಲಯಕ್ಕೆ ಬಂದಂತಹ ವಸ್ತುಗಳು ಪರೀಕ್ಷೆಗೆ ಅವಶ್ಯವಿರುವಂತೆ ಪ್ರಮಾಣ ಮತ್ತು ಗುಣಮಟ್ಟದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರೀಕ್ಷೆ ಮಾಡದೆ ಪೊಲೀಸರ ಕೋರಿಕೆಯ ಮೇಲೆ ಸುಳ್ಳು ವರದಿ ನೀಡಿರುತ್ತೇನೆ

ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ನಾನು ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ